

## ಮುಂಜಾಗ್ರತಾ ಕ್ರಮಗಳು

- ಉಣ್ಣೆ, ಸೊಳ್ಳೆ ಮತ್ತಿತರ ಕೀಟಗಳ ಕಡಿತದಿಂದ ರಕ್ಷಿಸಿಕೊಳ್ಳಬೇಕು.
- ಕಾಯಿಲೆ ಇರುವ ಪ್ರದೇಶಗಳಲ್ಲಿ ಓಡಾಡುವಾಗ, ಕೆಲಸ ಮಾಡುವಾಗ ಉದ್ದ ತೋಳಿನ ಶರ್ಟ್–ಪ್ಯಾಂಟ್ ಧರಿಸುವುದು ಸೂಕ್ತ .
- ಕೀಟ ವಿಕರ್ಷಕ (ವೈದ್ಯರ ಸಲಹೆ ಮೇರೆಗೆ) ಕೈ ಕಾಲುಗಳಿಗೆ ಲೇಪಿಸಿಕೊಳ್ಳಿರಿ.
- ಮೊಲದ ಜೊತೆಗಿನ ಸಂಪರ್ಕದಲ್ಲಿ ಕೈಗಳಿಗೆ ಗ್ಲೋವ್ಸ್, ಕನ್ನಡಕ ಧರಿಸಿರಿ. ಕಾಯಿಲೆ ಇರುವ ಪ್ರಾಣಿಗಳನ್ನು ಮುಟ್ಟಿದರೆ, ಮಾಂಸ ಮುಟ್ಟಿದರೆ ಸೋಪು ಮತ್ತು ಬಿಸಿನೀರಿನಿಂದ ತೊಳೆದುಕೊಳ್ಳಿರಿ. ಚೆನ್ನಾಗಿ ಬೇಯಿಸಿದ ಮಾಂಸವನ್ನೇ ತಿನ್ನಿರಿ.
- ಸಾಕುಪ್ರಾಣಿಗಳ ಆರೋಗ್ಯದತ್ತ ಗಮನ ಹರಿಸಿರಿ.
- ಕಾಯಿಲೆ ಪ್ರಾಣಿ/ಸತ್ತ ಪ್ರಾಣಿ ಪ್ರದೇಶದಲ್ಲಿ ಶೇ.1 ಸೋಡಿಯಂ ಹೈಪೋಕ್ಲೋರೈಡ್ (ಕ್ಲೋರಿನ್ ನೀರು), ಶೇ.70 ಎಥನಾಲ್, ಗ್ಲುಟೆರಾಲ್ಡೆಹೈಡ್, ಫಾರ್ಮಾಲ್ಡೆಹೈಡ್ ಬಳಸಿರಿ.
- ಈ ಕಾಯಿಲೆಗೆ ಅಮೆರಿಕ, ರಷ್ಯಾಗಳಲ್ಲಿ ವ್ಯಾಕ್ಸೀನ್ ಉಂಟು. ಆಂಟಿಬಯೋಟಿಕ್ ಔಷಧಿಗಳಿಂದ ಇದನ್ನು ಗುಣಪಡಿಸಬಹುದು.

ಬೇಯಿಸದ ಅಥವಾ ಹಸಿ ಮಾಂಸ ತಿನ್ನುವುದರಿಂದ ಕಾಯಿಲೆ ಹರಡುತ್ತದೆ. ನಾಯಿ, ಬೆಕ್ಕು, ಮೊಲ, ಅಳಿಲು ಮುಂತಾದ ಸಾಕುಪ್ರಾಣಿಗಳು ಪರಚುವುದರಿಂದ, ಕಚ್ಚುವುದರಿಂದ, ಉಗುರುಗಳಿಂದ, ಎಂಜಲಿನಿಂದಲೂ ಕಾಯಿಲೆ ಹರಡುತ್ತದೆ.

## ರೋಗ ಲಕ್ಷಣಗಳು

ಸಾಮಾನ್ಯವಾಗಿ ಸೋಂಕು ಸೋಂಕಿದ ಮೂರರಿಂದ ಐದು ದಿನಗಳಲ್ಲಿ ರೋಗಲಕ್ಷಣಗಳು ಕಾಣಿಸಿಕೊಳ್ಳಲು ಆರಂಭವಾಗುತ್ತವೆ. ಎರಡು ವಾರಗಳ ನಂತರವೂ ರೋಗಲಕ್ಷಣಗಳು ಪ್ರಕಟವಾಗಬಹುದು. ಎಲ್ಲಾ ರೋಗಿಗಳಲ್ಲೂ ರೋಗಲಕ್ಷಣಗಳು ಒಂದೇ ತೆರನಿರುವುದಿಲ್ಲ. ಆದ್ದರಿಂದ ರೋಗಲಕ್ಷಣಗಳ ಆಧಾರದ ಮೇಲೆ ಕಾಯಿಲೆ ಪತ್ತೆಮಾಡುವುದು ಕಷ್ಟಕರ. ತೀವ್ರತೆಯಲ್ಲಿ ಏರುಪೇರು ಇರುತ್ತದೆ. ಕೆಲವರಲ್ಲಿ ಕಾಯಿಲೆ ಸೌಮ್ಯ. ಕೆಲವರಲ್ಲಿ ಕಾಯಿಲೆ ಗಂಭೀರ. ಕೆಲವರಲ್ಲಿ ಕಾಯಿಲೆ ಇದ್ದರೂ ರೋಗಲಕ್ಷಣಗಳೇ ಕಾಣಿಸಿಕೊಳ್ಳುವುದಿಲ್ಲ. ಕೆಲವರಲ್ಲಿ ಕಾಯಿಲೆ ತೀವ್ರ ವಿಕೋಪಕ್ಕೆ ತಿರುಗಿ, ರೋಗಾಣುಗಳು ಶರೀರದ ಎಲ್ಲಾ ಒಳ ಅಂಗಾಂಗಗಳಿಗೂ ಹರಡಿ ಆತಂಕಕಾರಿ ಅಡ್ಡ ಪರಿಣಾಮಗಳಿಂದಾಗಿ ಮಾರಣಾಂತಿಕವಾಗಲೂಬಹುದು.

ಕಾಯಿಲೆ ಹಲವಾರು ಸ್ವರೂಪಗಳಲ್ಲಿ ಪ್ರಕಟವಾಗಬಹುದು. ಗಾಯ, ಕಣ್ಣು, ಬಾಯಿ, ಗಂಟಲು, ಶ್ವಾಸಕೋಶ – ಹೀಗೆ ಯಾವ ಮಾರ್ಗದ ಮೂಲಕ, ಹೇಗೆ ರೋಗಾಣುಗಳು ಶರೀರ ಪ್ರವೇಶಿಸುತ್ತವೆ ಎಂಬುದರ ಮೇಲೆ ಆಧರಿಸಿ ರೋಗಲಕ್ಷಣಗಳು ಪ್ರಧಾನವಾಗಿರುತ್ತವೆ. ಎಲ್ಲಾ ಸ್ವರೂಪಗಳಲ್ಲೂ ರೋಗಾಣುಗಳು ರಕ್ತ ಸೇರಿ, ರಕ್ತ ನಂಜಾಗಿ, ಕಾಯಿಲೆ ಮೆದುಳು, ಮೆದುಳುಬಳ್ಳಿ / ಬೆನ್ನುಹುರಿ, ಹೃದಯ, ಲಿವರ್, ಮೂಳೆಗೂ ಹರಡುತ್ತದೆ.

ಆರಂಭದಲ್ಲಿ ಫ್ಲೂ ಮಾದರಿ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಚಳಿ, ಜ್ವರ, ತಲೆನೋವು, ಮೈಕೈನೋವು, ಕೀಲುನೋವು, ಹಸಿವುಕೊರೆ, ಅನಾರೋಗ್ಯದಂತಹ ಲಕ್ಷಣಗಳು ಕಾಣಿಸಬಹುದು. ಉಣ್ಣೆ ಇಲ್ಲವೇ ಕೀಟ ಕಚ್ಚಿದ ಸ್ಥಳದಲ್ಲಿ ಹುಣ್ಣಾಗುತ್ತದೆ. ಆ ಜಾಗ ಕೆಂಪಗಾಗುತ್ತದೆ. ಉರಿ, ನೋವು ಕಾಣಿಸಿಕೊಳ್ಳುತ್ತದೆ. ಸಮೀಪದ ಹಾಲ್ರಸ ಗಂಟುಗಳ ಊತ, ಕಣ್ಣು ನೋವು, ಕೆಂಗಣ್ಣು, ಕಣ್ಣುನವೆ, ಕಣ್ಣುರೆಪ್ಪೆ ಊತ, ಕಣ್ಣುಪಕ್ಕದ ಹಾಲ್ರಸ ಗಂಟುಗಳ ಊತದ ಸಮಸ್ಯೆ ಉಂಟಾಗುತ್ತದೆ. ಗಂಟಲು ನೋವು, ಬಾಯಿಹುಣ್ಣು, ವಾಂತಿ, ಬೇಧಿ, ಟಾನ್ಸಿಲ್ ಗಡ್ಡೆ, ಕೊರಳ ಹಾಲ್ರಸಗಂಟುಗಳ ಊತ, ಒಣಕೆಮ್ಮು , ಎದೆನೋವು, ಉಸಿರಾಟ ಕಷ್ಟದಂತಹ ತೊಂದರೆಗಳೂ ಎದುರಾಗುತ್ತವೆ.

ಸಾಮಾನ್ಯವಾಗಿ ಜಾನುವಾರುಗಳಲ್ಲಿ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುವುದು ಅಪರೂಪ. ಬೆಕ್ಕುಗಳಲ್ಲಿ ಈ ಕಾಯಿಲೆ ತೀರಾ ಸಾಮಾನ್ಯ. ನಾಯಿಗಳಲ್ಲೂ, ಮಂಗ, ಗೊರಿಲ್ಲಾ, ಅಳಿಲು ಮುಂತಾದವುಗಳಲ್ಲೂ ಕಾಯಿಲೆ ಪ್ರಕಟವಾಗುತ್ತದೆ. ಕುರಿ–ಮೇಕೆಗಳಲ್ಲಿ ಕಾಯಿಲೆ ವಿಪರೀತವಾಗಿರುತ್ತದೆ, ಸಾವೂ ಹೆಚ್ಚು. ■